ಇ ಹಾಗಿದ್ದಲ್ಲಿ, ಇದರ ಪುನಃಶ್ಚೇತನದ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ; ಹಾಗಿದ್ದಲ್ಲಿ, ಇದರ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಈ ಕ್ಷೇತ್ರವನ್ನು ಪಿ2 ಕ್ಷೇತ್ರವನ್ನಾಗಿ ಮತ್ತು ದ್ವಿತಳಿ ಸಂಕರಣ ರೇಷ್ಮೆ ಮೊಟ್ಟೆಗಳನ್ನು ಚಾಕಿ ಮಾಡಿ ಸ್ಥಳಿಯ ರೇಷ್ಮೆ ಬೆಳೆಗಾರರಿಗೆ ಒದಗಿಸುವ ಕೇಂದ್ರವನ್ನಾಗಿ ಮುಂದುವರೆಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(388)166**
ಸದಸ್ಯರ ಹೆಸರು	:	**ಶ್ರೀ. ಪುಟ್ಟರಾಜು ಸಿ.ಎಸ್ (ಮೇಲುಕೋಟೆ)**
ಉತ್ತರಿಸುವ ಸಚಿವರು	:	**(ಶ್ರೀ ಶಿವರಾಜ್ ಎಸ್.ತಂಡರಗಿ) ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು**

1 ಮಂಡ್ಯ ಸರ್ಕಾರಿ ಸಕ್ಕರೆ ಕಾರ್ಖಾನೆಯನ್ನು ನವೀಕರಣಗೊಳಿಸಲು ಸರ್ಕಾರ ಚಿಂತನೆ ನಡೆಸಿದೆಯೇ;

ಮಂಡ್ಯ ಸಕ್ಕರೆ ಕಾರ್ಖಾನೆಯನ್ನು ನವೀಕರಣಗೊಳಿಸುವ ಸಂಬಂಧ 36.00 ಕೋಟಿ ರೂಗಳ ಬಂಡವಾಳ ಹೂಡಿಕೆ ಪ್ರಸ್ತಾವನೆಯನ್ನು ಕಾರ್ಖಾನೆಯಿಂದ ಸ್ವೀಕರಿಸಲಾಗಿದೆ. ಈ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

2 ಹಾಗಿದ್ದಲ್ಲಿ, ನವೀಕರಣಕ್ಕಾಗಿ ಮೀಸಲಿಟ್ಟ ಹಣವೆಷ್ಟು ಹಾಗೂ ಖರ್ಚು ಮಾಡಿದ ಹಣವೆಷ್ಟು;

ನವೀಕರಣಕ್ಕಾಗಿ ಯಾವುದೇ ಹಣವನ್ನು ಮೀಸಲಿಟ್ಟಿರುವುದಿಲ್ಲ. 2005–06 ರಿಂದ 2008–09ರ ಈ ದಿನಾಂಕದವರೆಗೆ ಕಾರ್ಖಾನೆಗೆ 80.10 ಕೋಟಿ ರೂಗಳನ್ನು ದುಡಿಯುವ ಬಂಡವಾಳ ಮತ್ತು ಇತರೆ ಉದ್ದೇಶಗಳಿಗಾಗಿ ಸರ್ಕಾರದಿಂದ ಸಾಲವಾಗಿ ನೀಡಲಾಗಿದೆ.

3 ಪೂರ್ಣ ನವೀಕರಣಕ್ಕಾಗಿ ತಗಲುವ ವೆಚ್ಚವೆಷ್ಟು ಹಾಗೂ ನವೀಕರಣದ ನಂತರ ಕಬ್ಬು ಅರೆಯುವ ಸಾಮರ್ಥ್ಯ ಹೆಚ್ಚಾಗುವುದೇ (ವಿವರ ನೀಡುವುದು)?

ಕಾರ್ಖಾನೆಯ ನವೀಕರಣಕ್ಕಾಗಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಒಂದು ತಾಂತ್ರಿಕ ಸಮಿತಿ ರಚಿಸಲಾಗಿದ್ದು, ತಾಂತ್ರಿಕ ಸಮಿತಿಯು ನೀಡುವ ವರದಿಯಲ್ಲಿ ಯೋಜಿತ ನವೀಕರಣಕ್ಕೆ ಎಷ್ಟು ಹಣ ಬೇಕಾಗಬಹುದು ಎಂಬ ಮಾಹಿತಿ ಲಭ್ಯವಾಗಲಿದೆ. ಹಾಗೂ ಪ್ರಸ್ತುತ ಕಾರ್ಖಾನೆ ಸಾಮರ್ಥ್ಯ 5000 ಟಿಸಿಡಿ ಇದ್ದು ಕಾರ್ಖಾನೆಯ ನವೀಕರಣದ ನಂತರವೇ ಕಬ್ಬು ಅರೆಯುವ ಸಾಮರ್ಥ್ಯ ಹೆಚ್ಚಾಗುವ ಬಗ್ಗೆ ತಿಳಿಯಬಹುದಾಗಿದೆ.